# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2605
2. ಸದಸ್ಯರ ಹೆಸರು ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ 24.03.2022
4. ಉತ್ತರಿಸುವ ಸಚಿವರು ಮಾನ್ಯ ಮುಖ್ಯಮಂತ್ರಿಯವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1. | (ಅ) ಸರ್ಕಾರಿ ನೌಕರರಿಗೆ ನೀಡುವ ವೈದ್ಯಕೀಯ ಸೌಲಭ್ಯಗಳನ್ನು ದಿನಗೂಲಿ ಕ್ಷೇಮಾಭಿವೃದ್ಧಿ ಅಡಿಯಲ್ಲಿ ನೇಮಕಗೊಂಡ ನೌಕರರಿಗೂ ನೀಡಲಾಗುತ್ತಿದೆಯೇ? ಹಾಗಿದ್ದಲ್ಲಿ, ವಿವರ ನೀಡುವುದು; ಇಲ್ಲದಿದ್ದಲ್ಲಿ, ಕಾರಣಗಳೇನು; ಈ ಬಗ್ಗೆ ಸರ್ಕಾರದ ನಿಲುವೇನು? | ಇಲ್ಲ. ದಿನಗೂಲಿ ನೌಕರರ ಸೇವಾ ಸೌಲಭ್ಯ ಮತ್ತು ಷರತ್ತುಗಳನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರಡಿಯಲ್ಲಿನ ಅವಕಾಶಗಳು ಮತ್ತು ಇತರೆ ಸಾಮಾನ್ಯ ಕಾನೂನಿಗೆ ಒಳಪಟ್ಟಂತೆ ಪರಿಶೀಲಿಸಿ ರೂಪಿಸಲಾಗಿದೆ. ಈ ವರ್ಗದ ನೌಕರರು ಖಾಯಂ ನೌಕರರಾಗಿರದೆ ಇರುವುದರಿಂದ, ಸರ್ಕಾರಿ ನೌಕರರಿಗೆ ನೀಡುವ ವೈದ್ಯಕೀಯ ಸೌಲಭ್ಯಗಳನ್ನು ನೀಡಿರುವುದಿಲ್ಲ. |
| 2. | (ಆ) ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಚಿಕಿತ್ಸೆ ಪಡೆದ ಸರ್ಕಾರಿ ನೌಕರರು ಭರಿಸಿದ ಮೊತ್ತವನ್ನು ಮರುಪಾವತಿ ಮಾಡುವಂತೆ ದಿನಗೂಲಿ ಕ್ಷೇಮಾಭಿವೃದ್ಧಿ ಅಡಿಯಲ್ಲಿ ನೇಮಕಗೊಂಡ ನೌಕರರಿಗೂ ಮರುಪಾವತಿ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಆದೇಶದ ಪ್ರತಿ ನೀಡುವುದು; ಇಲ್ಲದಿದ್ದಲ್ಲಿ, ಕಾರಣವೇನು; ಭರಿಸಿದ ಅರ್ಹ ಮೊತ್ತವನ್ನು ಮರುಪಾವತಿಸಲು ಆದೇಶ ಹೊರಡಿಸಲಾಗುವುದೇ? | ಇಲ್ಲ<br>ಮೇಲೆ (ಅ)ಗೆ ನೀಡಿದ ಉತ್ತರದಲ್ಲಿನ ವಿವರಣೆಗಳ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಆಸುಇ 20 ಸೇಸ್ಪಲ 2022

( ಬಸವರಾಜ ಬೊಮ್ಮಾಯಿ )
ಮುಖ್ಯ ಮಂತ್ರಿ